ದಿನಾಂಕ ೧೩ -೦೪-೨೦೧೩



# ಕಾವೇರಿ ಭಾವನದಿ ೨೦೧೩

ಕಾವೇರಿ ಕನ್ನಡ ಸಂಘ

ಮೇರಿಲ್ಯಾಂಡ್, ವಾಷಿಂಗ್ಟನ್ ಡಿ.ಸಿ ಮತ್ತು ವರ್ಜೀನಿಯ

## ಕಾವೇರಿ ಭಾವನದಿಯ ಓದುಗರಿಗೆ ಯುಗಾದಿಯ ಶುಭಾಶಯಗಳು.

ವಿಜಯ ಸಂವತ್ಸರ ನಿಮ್ಮೆಲ್ಲರ ಬಾಳಿನಲ್ಲಿ ಸಿಹಿ ತುಂಬಿ, ಕಹಿ ಕಳೆದು, ವರ್ಷವೆಲ್ಲಾ ಸುಖ, ಸ್ನೇಹ, ಶಾಂತಿ ಮತ್ತು ಸೌಹಾರ್ದತೆ ಗಳನ್ನು ಪಸರಿಸಲಿ.

**ಪ್ರತಿ ಯುಗಾದಿ ವಿಜಯದೊಸಗೆ**

**ಸ್ವತ್ವ ರಜೋಗುಣದ ಬೆಸುಗೆ**

**ಅಸುರ ವಧೆಯ ವೀರಗಾಥೆ**

**ಕನ್ನಡಿಗರ ಗೆಲುವ ಗೀತೆ||**

(ನಿತ್ಯೋತ್ಸವದ ಕವಿ ನಿಸಾರ್ ಅಹಮದ್ ಅವರ "ವರ್ಷಾದಿ") ೀರಗಾಥೆ

ಕನ್ನಡಿಗರ ಗೆಲುವ ಗೀತೆ||

ಭಾವನದಿ ೨೦೧೩ ರ ಮೊದಲ ಸಂಚಿಕೆ ನಿಮ್ಮ ಮುಂದಿದೆ. ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಬರಹಗಳು ನಿಮ್ಮ ಮನ ರಂಜಿಸುತ್ತವೆ ಎಂದು ನಂಬಿದ್ದೇವೆ.

ಖ್ಯಾತ ಅಂಕಣಕಾರ ಕಾವೇರಿಯ ಶ್ರೀ. ಶ್ರೀವತ್ಸ ಜೋಶಿಯವರ ಅಮೆರಿಕಾದಲ್ಲಿ ಯುಗಾದಿ ಹಬ್ಬದ ಬಗೆಗಿನ ಆಖ್ಯಾಯಿಕೆಯಿಂದ ಶುಭಾರಂಭ ಮಾಡೋಣವೇ?

# ಎಲ್ಲೆಲ್ಲೆಲ್ಲೂ ಹಬ್ಬ ಹಬ್ಬ ಬಂತು ಯುಗಾದಿ ಹಬ್ಬ...

**ಅಮೆರಿಕವು ಭಾರತಕ್ಕಿಂತ ಹಿಂದುಳಿದ ಪ್ರದೇಶ. ಸಮಯದ ಗಣನೆಯಲ್ಲಿ. ಕರಾರುವಾಕ್ಕಾಗಿ ಹೇಳುವುದಾದರೆ, ಇಲ್ಲಿ ಅಮೆರಿಕದ ಪೂರ್ವಕರಾವಳಿಯ ಸಮಯವು ಈಗ ಭಾರತದ ಸಮಯಕ್ಕಿಂತ ಒಂಬತ್ತೂವರೆ ಗಂಟೆ ಹಿಂದೆ. ಅಮೆರಿಕದ ಪಶ್ಚಿಮಕರಾವಳಿಯ ಸಮಯವು ಭಾರತದ ಸಮಯಕ್ಕಿಂತ ಹನ್ನೆರಡೂವರೆ ಗಂಟೆ ಹಿಂದೆ.**

**ಆದರೆ, ಈ ಸರ್ತಿ ಯುಗಾದಿ ಆಚರಣೆಯಲ್ಲಿ ಅಮೆರಿಕದಲ್ಲಿರುವ ಕನ್ನಡಿಗರು, ಕರ್ನಾಟಕದಲ್ಲಿರುವ ಕನ್ನಡಿಗರಿಗಿಂತ ಮುಂದೆ!**

**ಹೌದು. ಅಮೆರಿಕದಲ್ಲಿ ಯುಗಾದಿಹಬ್ಬ ಏಪ್ರಿಲ್ 10ರಂದು ಬುಧವಾರ. ಕರ್ನಾಟಕದಲ್ಲಿ ಯುಗಾದಿಹಬ್ಬ ಏಪ್ರಿಲ್ 11ರಂದು ಗುರುವಾರ. ಇದು ಹೇಗೆ ಸಾಧ್ಯ ಅಂತೀರಾ? ಖಗೋಳಶಾಸ್ತ್ರ ಆಧಾರಿತ ಈ ವಿವರಣೆಯನ್ನು ಓದುವಂಥವರಾಗಿ.**

**ಜನವರಿ 1ರಂದು ಶುರುವಾಗುವ ಇಂಗ್ಲಿಷ್ ಹೊಸವರ್ಷ ಸಂಪೂರ್ಣವಾಗಿ ಸೌರಮಾನವಾದ್ದರಿಂದ ಭೂಮಿಯಲ್ಲಿ ಪೂರ್ವದ ಭಾಗದಲ್ಲಿ (ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ, ಜಪಾನ್ ಇತ್ಯಾದಿ) ಮೊದಲು ಆಚರಣೆ. ಆಮೇಲೆ ಪಶ್ಚಿಮದ ದೇಶಗಳಲ್ಲಿ. ಇದಕ್ಕೆ ಕಾರಣವೇನೆಂದರೆ ದಿನಾಂಕ ಕ್ರಮದ ಕಾಲಗಣನೆಯಲ್ಲಿ ಒಂದು ತಾರೀಕು ಭೂಮಿಯ ಎಲ್ಲ ಭಾಗದಲ್ಲಿ ಏಕಕಾಲಕ್ಕೆ ಶುರುವಾಗುವುದಿಲ್ಲ. ಅಂತಾರಾಷ್ಟ್ರೀಯ ದಿನಾಂಕ ರೇಖೆ ಎಂಬ ಒಂದು ರೇಖಾಂಶವನ್ನು ಗುರುತಿಸಿರುವುದರಿಂದ ಅಲ್ಲಿ ಶುರುವಾಗಿ ಪಶ್ಚಿಮಕ್ಕೆ ಸಾಗುತ್ತದೆ.**
**ಆದರೆ ತಿಥಿಯ (ಚಂದ್ರನ ಚಲನೆಯನ್ನಾಧರಿಸಿದ ಕಾಲಗಣನೆ) ವಿಚಾರ ಹಾಗಲ್ಲ. ತಿಥಿ geocentric. ಅಂದರೆ ಭೂಮಿಯಲ್ಲಿ ಎಲ್ಲ ಕಡೆಗೂ ಒಂದೇಕಾಲಕ್ಕೆ ಶುರುವಾಗಿ ಒಂದೇ ಕಾಲಕ್ಕೆ ಕೊನೆಯಾಗುತ್ತದೆ. ಆ ಪ್ರಕಾರ 'ವಿಜಯ' ನಾಮ ಸಂವತ್ಸರದ ಚೈತ್ರ ಶುಕ್ಲ ಪಕ್ಷದ ಪಾಡ್ಯ ತಿಥಿಯು ಭಾರತೀಯ ಕಾಲಮಾನ ಪ್ರಕಾರ ಏಪ್ರಿಲ್ 10ರ ಬುಧವಾರ ಅಪರಾಹ್ನ 3:05ಕ್ಕೆ ಆರಂಭವಾಗುತ್ತದೆ. ಆದರೆ ಹಬ್ಬದಾಚರಣೆ ಮಾರನೇದಿನ. ಏಕೆಂದರೆ ಹಬ್ಬದಾಚರಣೆಗೆ ಆಯಾಯ ತಿಥಿಯು ಸೂರ್ಯೋದಯದ ವೇಳೆಯಲ್ಲೇ ಇರಬೇಕಾಗುತ್ತದೆ. ಏಪ್ರಿಲ್ 10ರ ಬುಧವಾರ ಭಾರತದಲ್ಲಿ ಸೂರ್ಯೋದಯದ ವೇಳೆ ಇನ್ನೂ ಅಮಾವಾಸ್ಯೆ ಇರುವುದರಿಂದ ಅವತ್ತು ಯುಗಾದಿ ಹಬ್ಬದ ಆಚರಣೆಯಾಗುವುದಿಲ್ಲ.**

**ಅಮೆರಿಕವು ಭಾರತಕ್ಕಿಂತ ಹಿಂದುಳಿದ ಪ್ರದೇಶ. ಸಮಯದ ಗಣನೆಯಲ್ಲಿ. .....**

**ಅಮೆರಿಕದಲ್ಲಿ ಏಪ್ರಿಲ್ 10ರಂದು ಸೂರ್ಯೋದಯದ ವೇಳೆಗೇ ಪಾಡ್ಯ ತಿಥಿ ಇರುವುದರಿಂದ ಅವತ್ತೇ ಯುಗಾದಿ ಆಚರಣೆ!**
**[ಅಮೆರಿಕದಲ್ಲಿ ಭಾರತೀಯ ಹಬ್ಬಗಳು ವಾರದನಡುವೆ ಬಂದರೆ ವಾರಾಂತ್ಯಕ್ಕೆ ಮುಂದೂಡಲಾಗುತ್ತದೆ ಎಂಬ ಮಾತು ಬೇರೆ :-)]**

**'ವಿಜಯ' ಸಂವತ್ಸರ ಎಲ್ಲರನ್ನೂ ವಿಜಯಶಾಲಿಯಾಗಿಸಲಿ.**

# <u>ಸ್ನೇಹ ಕಾಣಿಕೆ</u>

ಹಿರಿಯ ದಂಪತಿ ಕೃಷ್ಣ ಅಂಕಲ್ ಹಾಗೂ ಲೀಲಾ ಆಂಟಿಯವರ ಸನ್ಮಾನ ಸಮಾರಂಭಕ್ಕೆ ಶ್ರೀಮತಿ ಜಯಶ್ರೀ ಜಗದೀಶ್ ಅವರಿಂದ  ಒಂದು ಸುಂದರ ಕೊಡುಗೆ

ಕನ್ನಡ ಸಂಘದ ಹಬ್ಬವೋ
ಜನಮನಗಳ ಮಿಲನವೋ
ಧಮನಿಗಳಲಿ ಕನ್ನಡದ ಕಂಪ
ತುಂಬಿ ಬಂದ ದಂಪತಿಗಳ ಸೊಂಪ
ಹೇಳಬೇಕೆ ಯಾರಿವರಂತ?
ಮೆಲ್ದನಿಯ ಉಲಿವು ಕೇಳಿಬಂತ
ಇವರೇ "ಕೃಷ್ಣ ಲೀಲೆ"ಯರಂತ

ಮಳೆಯಿರಲಿ ಛಳಿಯಿರಲಿ
ಮಂಜಿನಾ ಕಡಲೇ ಹರಿಯುತಿರಲಿ
ಹರದಾರಿ ಬಲುದೂರ ಎಲ್ಲೇ ಇರಲಿ
ಹುಡುಕತಲಿ ಬಂದಾರು ಏನೇ ಬರಲಿ

ತುಂಬು ಹೃದಯದಿ ಸ್ನೇಹಿತರ ಹರಸ್ಯಾರು
ನಗೆಸೂಸಿ "ಹಲೋ" ಎಂದು ಕೈ ಕುಲುಕ್ಯಾರು
ಹಾಸ್ಯದಾ ಹೊನಲಲ್ಲಿ ಸ್ನೇಹಿತರ ಮುಳಿಗ್ಸ್ಯಾರು
ಅಂತಃಕರಣದಿ ಹುರಿದುಂಬಿಸ್ಯಾರು

ಇವರ ಮಾರ್ಗದರ್ಶನದಿ ಈ ಜೀವನ ಸಾಕಾರ
ರೂಪುಗೊಂಡಿದೆ ಪಡೆದು ಸಾಕ್ಷಾತ್ಕಾರ
ಶಿರಬಾಗಿ ಮುಡಿಬಾಗಿ ನಡುಬಾಗಿ ಬೇಡಿಪೆನು
ಸದಾ ಸಿಗಲಿ ಇವರ ಆಶೀರ್ವಚನ

ಒಲವಿನ ಚಿಲುಮೆ ಹಸ್ತದ ಸಿರಿ
ಹಂಚಿಕೊಂಡುದಕೆ ಸಹಸ್ರ ನಮನ
ನಿಮ್ಮ ಸ್ನೇಹ ಅನುಭವದ ಪರಿ
ಗುರಿತೋರಲಿ ಎಂದಿಗೂ ಚಿರಂತನ

————-

**-ಶ್ರೀಮತಿ. ಜಯಶ್ರೀ ಜಗದೀಶ್**
**ರಾಕ್ ವಿಲ್, ಮೇರಿಲ್ಯಾಂಡ್**

ಕಾವೇರಿ ಕುಟುಂಬದ ಹಿರಿಯ ಸದಸ್ಯರಲ್ಲಿ ಒಬ್ಬರಾದ ಶ್ರೀಮತಿ. ಸುಭದ್ರಾ ಕೇಶವಮೂರ್ತಿ ಕಾವೇರಿಯ ಹಿಂದಿನ, ಈಗಿನ ಅಧ್ಯಕ್ಷರನ್ನೆಲ್ಲಾ ಮಮತೆಯಿಂದ ಸ್ಮರಿಸುತ್ತಾ ಪದ ಚಮತ್ಕಾರದಿಂದ ಭಗವದ್ಸ್ಮರಣೆಯನ್ನೂ ಮಾಡಿದ್ದಾರೆ. ಓದಿ ಆನಂದಿಸಿ.

॥ ಶ್ರೀ ॥

## "ಮಮತೆಯ ಕಾವೇರಿ"

(ಪ್ರೆಸಿಡೆಂಟ್ರ ಹಾಡು)

ಕಾರುಣ್ಯಶಾಲಿನೀ ವೇದಸ್ವರೂಪಿಣೀ ರಿಪುಕುಲಹಾರಿಣೀ ।
ನೀನೇ ಸರ್ವರನು ಸಲಹುವ ಮಮತೆಯ ಕಾವೇರಿ ॥
ಪ್ರಥಮದಲ್ಲೇ ವಿಮಲಳಾಗಿ ಮೂರು ಸಂವತ್ಸರವನ್ನು ಪ್ರೀತಿಯಿಂದ ದಾಟಿಸಿದೆ ।
ಸಿದ್ಧಲಿಂಗ(ಯ್ಯ)ನ ಕರುಣೆಯಿಂದ ಕಾರ್ಯವೆಲ್ಲ ಸಿದ್ಧಿಸಿತು ॥

ದ್ವಾರಕಾನಾಥನ ದಯೆ ನಮಗೆಲ್ಲಾ ಆಯಿತು ।
ರಾಜಶೇಖರನ ರಂಜನೆಯಿಂದ ರಾರಾಜಿಸಿದ ನೀನು ॥
ಕೃಷ್ಣಮೂರ್ತಿಯ ಕೃಪಾಕಟಾಕ್ಷದಿಂದೆಲ್ಲರ ಕಣ್ಮಣಿಯಾದೆ ।
ಗುರು, ಸ್ವಾಮಿ ಅಯ್ಯಾ! ಇದೆಲ್ಲಾ ನಿನ್ನ ಮಹಿಮೆಯಯ್ಯಾ ॥

ಭಾರತೀಯರಾದ ನಮಗೆಲ್ಲಾ ಭಕ್ತಿ ಪ್ರೀತಿಯನಿತ್ತೆ ।
ಪ್ರಭಾಕರ ಪ್ರಕಾಶದಿಂದ ಪ್ರಜ್ವಲಿಸಿದೆ ॥
ನಂಜನಗೂಡಿನ ಶ್ರೀಕಂಠ, ಅಯ್ಯಾ ।
ತವಕದಿಂದ ನಿನ್ನ ಪ್ರಾರ್ಥಿಪೇನಯ್ಯಾ ॥

ಗಾಯತ್ರಿ ಮಂತ್ರೋಪದೇಶದಿಂದಾ ।
ನಟರಾಜನ ನಾಟ್ಯವೈಭವದಿಂದಾ ॥
ವಸಂತ ಕಾಲದಲ್ಲಿ ಅರ್ಚಿಸಿ ।
ಆಚಾರ್ (ರ) ವಿಚಾರ ತಿಳಿದು, ಲವಲವಿಕೆ(ಪ್ಪ)ಯಿಂದಾ ॥

ಸುಶೀಲ ಸಹೃದಯದ ವಿಶ್ವನಾಥ, ನೀನೆ ಜಗತ್ ಧಾತ ।
ಸುಮ ವೃಷ್ಟಿ ಕರೆದು, ಗೋಪಿ ಜನ ವೃಂದ ಪಾಡಲು ॥
ತಾಯೇ ಶೈಲಜಾ- ಶಶಿಕಲಾ ಪೊರೆಯುವಳು ।
ಸದಾ ವಿಜಯಲಕ್ಷ್ಮೀ ಕೃಪೆಯಿಂದಾ ॥

ಚಂದ್ರಸೇನಾ ಅರಸು ಸುರೇಶಾ ।
ರವಿಯಂತೆ ರಾರಾಜಿಸುತ್ತಾ ॥
ನಾಗಶಂಕರನನ್ನು ಅರ್ಚಿಸಿ ।

ಸದಾ ಹರೀಶನಲ್ಲಿ ಭಕ್ತಿಯಿಂದಾ ।
ರಾಮಚಂದ್ರನ ಮಹದೇಶದಂತೆ ॥
ಸ್ವಾಮಿ ನಾರಾಯಣನನ್ನು ಪೂಜಿಸಿ ।
ಶಿವು ಭಟ್ಟರಿಂದ ವೇದಮಂತ್ರ ಪಠಿಸಿ ॥

ಮೀನಾಕ್ಷಿ ತಾಯಿಯನ್ನು ನೆನೆದು ।
ಗುರು ಗಳ ದಯೆಯಿಂದಾ, ಎಲ್ಲರೂ ॥
ಜಯಜಯ ಜಯಶ್ರೀ ಎಂದು ಸ್ತೋತ್ರ ಮಾಡಿ ।
ಹರಿದಾಸರೆಲ್ಲಾ ಭಜನೆ ಪಾಡಿ ॥

ತಾಯಿ ಕಾವೇರಿ ಪಾದಕ್ಕೆ, ಶರ್ಮೀಳಾ ಶುಭಕರೀ, ಎಂದು ।
ಸಂತೋಷದಿಂದ ಪ್ರಾರ್ಥಿಸೋಣಾ ॥
ಬಾ ತಾಯೇ ಬಾ ತಾಯೇ ಕಾವೇರಿ ತಾಯೇ ।
ನಗುನಗುತ ಬಂದು ಸರ್ವರನು ಹರಸಮ್ಮ ತಾಯೇ॥

"ಶ್ರೀ ಕೃಷ್ಣಾರ್ಪಣಮಸ್ತು"

- ಶ್ರೀಮತಿ. ಸುಭದ್ರಾ ಕೇಶವಮೂರ್ತಿ
**ರಾಕ್ ವಿಲ್, ಮೇರಿಲ್ಯಾಂಡ್**

ಡಾ. ಶ್ರೀನಿವಾಸ್ ಸುಬ್ರಮಣ್ಯ ಅವರು ನಮ್ಮೆಲ್ಲರ ಹೆಮ್ಮೆಯ ಕನ್ನಡಿಗ, ಕಾವೇರಿಗ. ಈಗ ಫ್ಲೋರಿಡಾ ರಾಜ್ಯದಲ್ಲಿ ನೆಲಸಿರುವ ಡಾ. ಸುಬ್ರಮಣ್ಯ ಅವರ ಸೇವಾ ಮನೋಭಾವ, "ಸಮತ್ವ" ವಾದದ ಪರಿಚಯ ಮಾಡಿ ಕೊಟ್ಟಿದ್ದಾರೆ ಕಾವೇರಿಯ ಶ್ರೀಮತಿ. ವೀಣಾ ಸುರೇಶ್.

## "ಸಮತ್ವ"ದ ಶ್ರೀನಿವಾಸ್

"ಜನತಾ ಸೇವೆಯೇ ಜನಾರ್ಧನ ಸೇವೆ " ಅನ್ನುವ ನಂಬಿಕೆಯೊಂದಿಗೆ, ಹಳ್ಳಿಯ ಪ್ರತಿಭಾವಂತ ಬಡ ಮಕ್ಕಳ ವಿದ್ಯಾವಂತರಾಗಬೇಕೆನ್ನುವ ಕನಸು ನನಸು ಮಾಡುವ ಪಣ ತೊಟ್ಟು, ಅವರ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡುವ ಸಲುವಾಗಿ, ತನ್ನ ಕಾಲೇಜಿನ ಎಂಟು ಜನ ಸ್ನೇಹಿತರ ಜೊತೆಗೂಡಿ, ಸಮತ್ವ ಟ್ರಸ್ಟ್ ( ಸಮತ್ವ - ಸಂಸ್ಕೃತ ಪದ, ಕನ್ನಡ ಸಮಾನಾರ್ಥಕ ಪದ-
ಸಮಾನತೆ) ಸ್ಥಾಪಿಸಿ ಅದರ ಏಳಿಗೆಗೆ ತಮ್ಮ ಬಿಡುವಿಲ್ಲದ ಕೆಲಸದ ನಡುವೆ ಬಿಡುವು ಮಾಡಿಕೊಂಡು ಯಾವುದೇ ಪ್ರಚಾರದ ಮೋಹಕ್ಕೆ ತುತ್ತಾಗದೆ ಸದ್ದಿಲ್ಲದೇ ದುಡಿಯುತ್ತಿರುವ ಮೇರು ವ್ಯಕ್ತಿತ್ವ ಡಾ. ಶ್ರೀನಿವಾಸ ಸುಬ್ರಮಣ್ಯ ಅವರದು.

ಅವಿದ್ಯಾವಂತ ತಂದೆ ತಾಯಿ, ಜೊತೆಗೆ ಕಿತ್ತುತಿನ್ನುವ ಬಡತನ, ಇವೆಲ್ಲಾ ಇವರ ಓದಿ ವಿದ್ಯಾವಂತನಾಗ ಬೇಕೆನ್ನುವ ಹಂಬಲ, ಕನಸು, ಆಕಾಂಕ್ಷೆಗಳಿಗೆ ಅಡ್ಡಿಯಾಗಲಿಲ್ಲ, ಬದಲಿಗೆ ಅವರನ್ನು ಇಂದು ಮೇಧಾವಿ ವಿಜ್ಞಾನಿಗಳ ಸಾಲಿಗೆ ಸೇರಿಸಿದೆ ಅಂದರೆ ತಪ್ಪಾಗಲಾರದು. ಪತಿಯ ಪ್ರತಿಯೊಂದು ಕಾರ್ಯದಲ್ಲಿ ಬೆನ್ನೆಲುಬಾಗಿ ನಿಂತು ಡಾ. ಶ್ರೀನಿವಾಸ್ ಅವರಿಗೆ ಉತ್ತೇಜನ ನೀಡಿ ಸಹಕರಿಸುತ್ತಿರುವ ಅವರ ಪತ್ನಿ ಪತಿಗೆ ತಕ್ಕ ಸತಿ. ಸಮತ್ವ ಟ್ರಸ್ಟಿನ ಕಾರ್ಯ ಚಟುವಟಿಗೆಗಳಲ್ಲಿ ತನ್ನನ್ನು ಪೂರ್ತಿಯಾಗಿ ತೊಡಗಿಸಿಕೊಂಡಿರುವ ಡಾ.ಶ್ರೀನಿವಾಸ ಸುಬ್ರಮಣ್ಯ ಅವರು ತನ್ನಂತಹ ಹಳ್ಳಿಯ ಬುದ್ದಿವಂತ ಮಕ್ಕಳ ನೋವನ್ನು ಅರಿತು ಅವರ ವಿದ್ಯಾಭ್ಯಾಸಕ್ಕೆ ಧನ ಸಹಾಯದ ಪ್ರೋತ್ಸಾಹ ಕೊಡುತ್ತಾ ತನ್ಮೂಲಕ ಬಡ ಮಕ್ಕಳ ಕನಸಿಗೆ ನೀರೆರೆದು ಪೋಷಿಸುತ್ತಾ ಆರೋಗ್ಯಕರವಾದ ಸಮಾಜ ನಿರ್ಮಾಣಕ್ಕೆ ತನ್ನ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ. ನೂರುಮಂದಿ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಟ್ಟಿರುವುದಲ್ಲದೆ ಆರು ಮಂದಿ ವಿದ್ಯಾರ್ಥಿ ಗಳ ಸಂಪೂರ್ಣ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಸಮತ್ವ ಟ್ರಸ್ಟ್ ವಹಿಸಿಕೊಂಡಿದೆ.ಎಲೆಮರೆಯ ಕಾಯಿಯಂತೆ ಜನತೆಗೆ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಇವರು ನಮಗೆಲ್ಲರಿಗೂ ಮಾದರಿ.

-ಶ್ರೀಮತಿ. ವೀಣಾ ಸುರೇಶ್
ವುಡ್ ಸ್ಟಾಕ್, ಮೇರಿಲ್ಯಾಂಡ್

ಸಮತ್ವ ಟ್ರಸ್ಟ್ ನ ಬಗ್ಗೆ ಪಾಮ್ ಬೀಚ್ ಪೋಸ್ಟ್ ನಲ್ಲಿ ಈಚೆಗೆ ಒಂದು ಲೇಖನ ಪ್ರಕಟವಾಗಿತ್ತು. ಅದರ ಕೊಂಡಿ ಇಲ್ಲಿದೆ.

http://www.palmbeachpost.com/news/lifestyles/far-from-home-not-far-from-heart/nWSCr/

ಕಾವೇರಿಯ 'ಕನ್ನಡ ಕಲಿಯೋಣ ' ಗುರುಗಳಲ್ಲಿ ಒಬ್ಬರಾದ ಶ್ರೀ. ಸುಬೋಧ ಕೋಪರ್ಡೆಯವರು ರಚಿಸಿದ ಕನ್ನಡ Appನ ಕಿರು ಪರಿಚಯ ಕಾವೇರಿಯ ಶ್ರೀ. ಶ್ರೀವತ್ಸ ಜೋಶಿಯವರಿಂದ:

"ಕನ್ನಡ ಕಲಿಯೋಣ" ಬಳಗಕ್ಕೆ ಮತ್ತು ಎಲ್ಲ ಕನ್ನಡಿಗರಿಗೂ ಒಳ್ಳೆಯ ಕಾಣಿಕೆ ಕೊಟ್ಟಿದ್ದಾರೆ ಸುಬೋಧ ಕೋಪರ್ಡೆಯವರು! ಅವರಿಗೆ ನಮ್ಮೆಲ್ಲರ ಅಭಿನಂದನೆಗಳು ಮತ್ತು ಹೃತ್ಪೂರ್ವಕ ಧನ್ಯವಾದಗಳು ಸಲ್ಲಬೇಕು.
"Kannada Flashcards" App ಬಹಳ ಚೆನ್ನಾಗಿದೆ!

ನಮ್ಮ ಸಂಸ್ಕೃತಿ, ನಾವು ಗೌರವಿಸುವ ಮೌಲ್ಯಗಳು, ನಮ್ಮ ಪರಂಪರೆ- ಇವುಗಳನ್ನು ಉಳಿಸಿ ಬೆಳೆಸುವುದಕ್ಕೆ ಈ ರೀತಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳುವುದು ತುಂಬ ಒಳ್ಳೆಯ ವಿಚಾರ.

ಸುಬೋಧ ಅವರು ಅಷ್ಟು ಮುತುವರ್ಜಿ ವಹಿಸಿ ಈ Appಅನ್ನು ರಚಿಸಿದ್ದಾರೆಂದರೆ, ಅದನ್ನು download ಮಾಡಿ ಉಪಯೋಗಿಸುವಷ್ಟು ಮುತುವರ್ಜಿ ಇಲ್ಲದವರು ನಾವು ಆಗಬಾರದು. ಹಾಗಾಗಿ ಬಳಸೋಣ, ಕನ್ನಡ ಕಲಿಕೆಯನ್ನು ಬೆಳೆಸೋಣ.

ಇಂತೀ,

**Srivathsa Joshi**

ಕನ್ನಡ ಕಲಿಯುವ ಉತ್ಸಾಹ ಇರುವ "ಕನ್ನಡ ಕಲಿ"ಗಳಿಗೆ ಮತ್ತಷ್ಟು ಗಣಕ ಸಹಾಯಕ ತಂತ್ರಾಂಶಗಳು:

Kannada for android: http://www.appszoom.com/android_applications/kannada

Kannada for iphone: http://appfinder.lisisoft.com/ipad-iphone-apps/etv-kannada.html

***"ಬೇಗ್ಬೇಗ ಎಲ್ಲಾ ಡೌನ್ಲೋಡ್ ಮಾಡಿ- ಚೆನ್ನಾಗಿ ಕನ್ನಡ ಕಲಿಸಿ, ಕಲ್ಕೊಳಿ!"***

"ಕನ್ನಡ ಕಲಿಯೋಣ" ಕಾರ್ಯಚಟುವಟಿಕೆಗಳತ್ತ  ಕಿರುನೋಟ-ಕಾವೇರಿಯ ಕನ್ನಡ ಕಲಿಯೋಣದ ಗುರುಗಳೊಬ್ಬರಾದ ಶ್ರೀ ಫಣೀಂದ್ರ ಮಂಕಾಲೆಯವರ ವರದಿಯಿಂದ ಆಯ್ದ ಭಾಗಗಳು:

(ಹೆಚ್ಚಿನ ವಿವರಗಳಿಗೆ ಭೇಟಿ ನೀಡಿ : ಕನ್ನಡ ಕಲಿಯೋಣ )









Kaveri Association had organized a fun-filled ski trip for young Kaveriites this winter. The event had good number of participants and the Kaveri children thoroughly enjoyed it. The trip inspired the veteran of Skiing Dr. Jai Rangalppa, whose physical age has not diminished an iota of his brimming enthusiasm for skiing and teaching skiing; to write this poem about skiing and becoming one with Mother Nature! It also inspired young Tara Swami, who tried skiing for the first time and fell in love with the sport, to share her experience with us. Thank you Dr. Rangappa and Tara for giving us an opportunity to enjoy skiing through your words!

# SNOW SKIER

One can often break man's rule,
With mother Nature never fool,
The Nature will definitely win,
Don't make her angry or grin.

Downhill skiing is a speed sport,
Go down with gravity and forte,
Skiing with mother Nature free,
On snow clad mountain with glee.

All children with Nature flow,
With a Creators wonder glow,
Enjoy with Him fast or slow,
Skiing child is a lovely show.

Guiding a child to snow plough,
Watch happy skier in the snow.


Dr. Jai Rangappa
3-2-2013



By Tara Swamy 3/5/2013

I had lots of fun with the members of KYC that came to the ski trip to White tail ski resort on March 2nd 2013 at Pennsylvania. We had a lot of fun skiing and snow tubing with family and friends. I enjoyed this trip very much and even though I fell a few times and those ski boots were SO uncomfortable, in the end I was proud of myself for trying something new. The part of the trip I liked the most was having a chance to share in doing something new with my family and friends. This trip has been a very good experience for me and everyone else that was there and I sincerely hope that KYC will consider doing this again next year.

ಕಾವೇರಿ ಕುಟುಂಬಕ್ಕೆ ನಮ್ಮ ಕನ್ನಡ ಪ್ರಹಸನ ಪಿತಾಮಹ ಟಿಪಿಕಲ್ ಟಿ.ಪಿ. ಕೈಲಾಸಂ ಅವರ ನಾಟಕಗಳ ಪರಿಚಯವನ್ನು ವಿಶಿಷ್ಟ ರೀತಿಯಲ್ಲಿ ಮಾಡಿಕೊಡಲು ಶ್ರೀ ಸುಂದರ್ ಹಾಗೂ ಶ್ರೀಮತಿ ವೀಣಾ ಸುಂದರ್ ಅವರು ಬರುತ್ತಿದ್ದಾರೆ ಎಂದು ತಿಳಿದಾಗ ಹಿರಿಯ ಕಾವರಿಗ ಡಾ. ರಂಗಪ್ಪ ಅವರಿಗೆ ಬಂದ ಸ್ಫೂರ್ತಿಯ ಫಲ- ಕೈಲಾಸಂ ಅವರಿಗೆ ಕಾವೇರಿ ಪರವಾಗಿ ಡಾ. ರಂಗಪ್ಪ ಅವರಿಂದ ಈ "ಟೋಸ್ಟ್ "



# TP KAILASAM

Kannada writer was TP Kailasam,
American would call T.P. Cal Sam,
Jokingly said he, Typical Ass am,
Staged hilarious plays in bedlam.

Concocted of real life situation
While under a little inebriation,
His daughter wrote them down,
For a grateful public showdown.

Books and plays published late,
After passing his earthly fate,
Plays spoke in Kannada & English,
Comedy of real life to the finish.

Some manuscripts were all lost,
If he came as a hilarious ghost,
He could entertain the most,
All his admirers city to coast.

Kannadigas appreciate and boast,
As he made life a hilarious toast.

Jai Rangappa

ಕಾವೇರಿ ಪುಟಾಣಿಗಳ ಕಲಾವಂತಿಕೆಯ ಕಿರುನೋಟ

**Divya Bhat, 9 years**

**German Town, Maryland**





**Veda Murthy, 5 years**

**Fairfax, Virgina**

